# ಕರ್ನಾಟಕ ಸರ್ಕಾರ

ಕ್ರಮಾಂಕ: ಇಡಿ 56 ಯುಬಿವಿ 2004

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 23-03-2004

## ಸುತ್ತೋಲೆ

ವಿಷಯ: ಪದವಿ ಕೋರ್ಸುಗಳಲ್ಲಿ ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಭಾಷಾ/ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ: 20-03-2004 ಸಂಖ್ಯೆ: ಅಂಅನಿ/ಆಸ್ಪಿ ಅನು04/03-04ರ ಅಂಗವಿಕಲರ ಅಧಿನಿಯಮ ಆಯುಕ್ತರ ಪತ್ರ.

1. ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢ ಶಿಕ್ಷಣ ಮತ್ತು ಪಿಯುಸಿಯಲ್ಲಿ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ತೆಗೆದುಕೊಳ್ಳಲು ಅವಕಾಶವಿದ್ದು, ಉಳಿದ ಎರಡು ಭಾಷೆಗಳಲ್ಲಿ ವಿನಾಯಿತಿ ನೀಡಲಾಗಿರುತ್ತದೆ. ಇಂತಹ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢಶಿಕ್ಷಣ ಮತ್ತು ಪಿಯುಸಿ ತರಗತಿಗಳಲ್ಲಿ ಭಾಷಾ ಕಲಿಕೆಯಿಂದ ನೀಡಲಾಗಿರುವ ಈ ವಿನಾಯಿತಿಯನ್ನು ಪದವಿ ತರಗತಿಗಳಿಗೂ ಸಹ ವಿಸ್ತರಿಸಲು ಮನವಿಗಳು ಸ್ವೀಕೃತವಾಗಿವೆ.

2. ಇಂತಹ ವಿದ್ಯಾರ್ಥಿಗಳಿಗೆ ಪದವಿ ಕೋರ್ಸುಗಳಲ್ಲಿ ಭಾಷಾ ಕಲಿಕೆಯಿಂದ ವಿನಾಯಿತಿ ನೀಡುವ ವಿಷಯವನ್ನು ಅಂಗವಿಕಲರ ಅಧಿನಿಯಮದ ಆಯುಕ್ತರಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿದೆ. ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಪ್ರೈಮರಿ, ಪ್ರೌಢ ಶಿಕ್ಷಣ ಮತ್ತು ಪಿಯುಸಿ ತರಗತಿಗಳಲ್ಲಿ ಭಾಷಾ ಕಲಿಕೆಯಿಂದ ವಿನಾಯಿತಿ ನೀಡಲಾಗಿರುವುದರಿಂದ ಪದವಿ ಕೋರ್ಸುಗಳಲ್ಲಿ ಭಾಷೆ ಅಭ್ಯಾಸ ಮಾಡುವುದು ಪ್ರಾಯೋಗಿಕವಾಗಿ ಸೂಕ್ತವೆಂದು ಕಂಡುಬರುವುದಿಲ್ಲ. ಆದ್ದರಿಂದ ಇಂತಹ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಈಗಾಗಲೇ ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣದಲ್ಲಿ ನೀಡಲಾಗಿರುವ ಭಾಷಾ ವಿನಾಯಿತಿ ಸೌಲಭ್ಯವನ್ನು ಪದವಿ ಕೋರ್ಸುಗಳಿಗೂ ಸಹ ವಿಸ್ತರಿಸುವ ಬಗ್ಗೆ ಪರಿಶೀಲಿಸಲಾಗಿದೆ.

3. ಬಿಎ/ಬಿಎಸ್ಸಿ/ಬಿಕಾಂ ಹಾಗೂ ಇತರ ಪದವಿ ಕೋರ್ಸುಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್, ಶ್ರವಣದೋಷವುಳ್ಳವರು, ಕಲಿಕೆ ನ್ಯೂನ್ಯತೆ, ಬುದ್ಧಿಮಾಂಧ್ಯ ವಿದ್ಯಾರ್ಥಿಗಳಿಗೆ ಎಲ್ಲಾ ಪದವಿ ಕೋರ್ಸುಗಳಲ್ಲಿ ಪ್ರಥಮ ಮತ್ತು ದ್ವಿತೀಯ ವರ್ಷದ ಎರಡನೇ ಭಾಷೆಯನ್ನು ಅಭ್ಯಾಸ ಮಾಡುವುದರಿಂದ ಹಾಗೂ ಸದರಿ ಭಾಷಾ ಪರೀಕ್ಷೆಯಿಂದ ವಿನಾಯಿತಿ ನೀಡುವಂತೆ ಈ ಮೂಲಕ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ.

(ಸುಂದರರಾಜ್ ಗುಪ್ತ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಅದರ 1000 ಪ್ರತಿಗಳನ್ನು ಒದಗಿಸುವಂತೆ ಕೋರಲಾಗಿದೆ.

ಪ್ರತಿ ಇವರಿಗೆ:

1. ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು/ಕುಲಸಚಿವರು (ಮೌಲ್ಯಮಾಪನ) ರವರಿಗೆ

2. ಕಾಲೇಜು ಶಿಕ್ಷಣ ಆಯುಕ್ತರು / ನಿರ್ದೇಶಕರು, ಬೆಂಗಳೂರು - 560 001
3. ಆಯುಕ್ತರು, ಅಂಗವಿಕಲ ಅಧಿನಿಯಮ ಕಛೇರಿ, ನಂ. 40, ತಂಬುಚೆಟ್ಟಿ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು - 560 005
4. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು - 560 001
5. ಸರ್ಕಾರದ ಉಪ ಕಾರ್ಯದರ್ಶಿ -4, ಶಿಕ್ಷಣ ಇಲಾಖೆ
6. ಸರ್ಕಾರದ ಅಧೀನ ಕಾರ್ಯದರ್ಶಿ, (ತಾಂತ್ರಿಕ/ಕಾಲೇಜು ಶಿಕ್ಷಣ)
7. ಶಾಖಾಧಿಕಾರಿಗಳು, ವಿಶ್ವವಿದ್ಯಾಲಯ - 1/ವಿಶ್ವವಿದ್ಯಾಲಯ-2/ಕಾಲೇಜು ಶಿಕ್ಷಣ/ತಾಂತ್ರಿಕ ಶಿಕ್ಷಣ/ಸಾಮಾನ್ಯ-1/ ಸಾಮಾನ್ಯ-2
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಉನ್ನತ ಶಿಕ್ಷಣ) ಇವರ ಆಪ್ತ ಕಾರ್ಯದರ್ಶಿ
9. ಸರ್ಕಾರದ ಸಹ ಕಾರ್ಯದರ್ಶಿಗಳ ಆಪ್ತ ಸಹಾಯಕರು
10. ಪತ್ರಿಕಾ ವೇದಿಕೆ

ಈಗಾಗಲೇ ಉಲ್ಲೇಖಿಸಿರುವ ವಿಶೇಷ ಅವಶ್ಯಕತೆಗಳುಳ್ಳ ದೃಷ್ಟಿವಿಕಲ, ಅಂಗವಿಕಲ ವಿದ್ಯಾರ್ಥಿಗಳು ತಮಗೆ ಸಂಬಂಧಿಸಿದಂತೆ ವೈದ್ಯಕೀಯ ಪ್ರಮಾಣ ಪತ್ರವನ್ನು ಅರ್ಜಿ ಸಹಿತ ಸಲ್ಲಿಸುವುದು.

19) ಯಾವುದಾದರೂ ಒಂದು ಅಥವಾ ಹೆಚ್ಚಿನ ಅಂಗವಿಕಲತೆಯ ತೊಂದರೆಯಿಂದ ನರಳುತ್ತಿರುವ ಹಾಗೂ ದೃಷ್ಟಿ ಹಾಗೂ ಶ್ರವಣ ವೈಫಲ್ಯತೆ ಇರುವ ಅಭ್ಯರ್ಥಿಗಳಿಗೆ ಹೆಚ್ಚಿನ ಸಮಯ ನೀಡುವ ಅವಕಾಶವಿರುತ್ತದೆ.

ಅಂಗವಿಕಲತೆ ಎಂದರೆ,

ಅ) ಮೆದುಳಿನ ಪಾರ್ಶ್ವವಾಯು

ಆ) ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು.

ಇ) ಮಾತು ಅಸ್ಪಷ್ಟ ಮತ್ತು ಅಂಗಾಂಗ ನ್ಯೂನತೆ ಇರುವವರು.

ಈ) ಯಾವಾಗಲೂ ಬಲಗೈಯಲ್ಲಿ ಬರೆಯುತ್ತಿದ್ದು ಪರೀಕ್ಷೆ ಸಮಯದಲ್ಲಿ ಬಲಗೈಗೆ ತೊಂದರೆಯಾಗಿ ಅಥವಾ ಯಾವಾಗಲೂ ಎಡಗೈಯಲ್ಲಿ ಬರೆಯುತ್ತಿದ್ದರು ಪರೀಕ್ಷೆ ಸಮಯದಲ್ಲಿ ಎಡಗೈ ತೊಂದರೆಯಾಗಿ ಬಲಗೈಯಲ್ಲಿ ಬರೆಯುವುದರಿಂದ ನಿಧಾನವಾದ ಸಂದರ್ಭಗಳಲ್ಲಿ

1) 2-30 ಹಾಗೂ 3 ಘಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ ಒಂದು ಘಂಟೆ

2) 2 ಘಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ 45 ನಿಮಿಷಗಳು

3) 1 ಘಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ 30 ನಿಮಿಷಗಳು

20) ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳ ಬಗ್ಗೆ ಪರಿಪೂರ್ಣ ವಿವರಗಳನ್ನು ಈಗಾಗಲೇ ಶಾಲೆಗಳಿಗೆ ನೀಡಿರುವ ನಿರ್ವಹಣಾ ಕೈಪಿಡಿಯ ಪುಟ - 6 ಮತ್ತು 7 ರಲ್ಲಿ ವಿವರಿಸಲಾಗಿದೆ. ಆ ವಿವರಣೆಯಲ್ಲಿ ನೀಡಿರುವ ಕೋಷ್ಟಕದಂತೆ ಭಾಷಾ ಹೊಂದಾಣಿಕೆಯನ್ನು ರಾಜ್ಯದ ಭಾಷಾ ನೀತಿಯಂತೆ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ಇದಕ್ಕೆ ಯಾವುದೇ ವಿನಾಯಿತಿ ನೀಡುವ ಪ್ರಶ್ನೆ ಬರುವುದಿಲ್ಲ.

ನಿರ್ದೇಶಕ

(ಪರೀಕ್ಷೆಗಳು)